# 31. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಅನ್ವರ್ ಕಾಲೋನಿ

"ಗಂಗಾ ಸ್ನಾನತುಂಗಾ ಪಾನ" ಎಂಬ ನಾಲ್ನುಡಿಯಲ್ಲಿ ಪ್ರಸಿದ್ಧವಾಗಿರುವ ತುಂಗಾ ನದಿ ದಂಡೆಯ ಮೇಲಿರುವ ಶಿವಮೊಗ್ಗ ನಗರದಿಂದ ಸುಮಾರು 25 ಕಿ ಮೀ ದೂರದಲ್ಲಿರುವ ಐತಿಹಾಸಿಕವಾಗಿ ಬೆಂಕಿಪುರವೆಂದು ಪ್ರಸಿದ್ಧವಾಗಿದ್ದ ಭದ್ರಾನದಿ ದಂಡೆಯ ಮೇಲಿರುವ ಅನೇಕ ಕೈಗಾರಿಗೆಗಳಿಗೆ ಪ್ರಸಿದ್ಧವಾಗಿರುವ ನಗರವೇ ಭದ್ರಾವತಿ. ಈ ನಗರದಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಬಾಹುಳ್ಯದ ಪ್ರದೇಶ ಅನ್ವರ್ ಕಾಲೋನಿ. ಇಲ್ಲಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯು ಸುಮಾರು 157 ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದೆ. ಉರ್ದು ಮಾಧ್ಯಮದ ಈ ಶಾಲೆಯು ಇತರೇ ಉರ್ದು ಮಾಧ್ಯಮದ ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ತುಸು ವಿಭಿನ್ನ. ಇದಕ್ಕೆ ಕಾರಣವೇ ಈ ಶಾಲೆಯ ಯಶೋಗಾಥೆ.




## ಉರ್ದು ಶಾಲೆಯಲ್ಲಿ ಸೌಲಭ್ಯಗಳ ಸಂತೆ.

ಸರ್ಕಾರ ಒದಗಿಸುವ ಎಲ್ಲಾ ಸೌಲಭ್ಯಗಳ ಜೊತೆಗೆ ಇಲ್ಲಿನ ಮಕ್ಕಳಿಗೆ ಹೆಚ್ಚುವರಿ ಸೌಲಭ್ಯಗಳು ಸಿಗುತ್ತಿರುವುದು ಸಂತಸದ ವಿಚಾರ. ಶಾಲೆಯ ಮುಖ್ಯಸ್ಥರಾದ ಶ್ರೀಮತಿ ತಾಜುನ್ನಿಸಾ, ಸಹ ಶಿಕ್ಷಕರು ಹಾಗು ಎಸ್ ಡಿ ಎಮ್ ಸಿಯವರ ಪ್ರಯತ್ನದ ಫಲವಾಗಿ ಶಾಲೆಯಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ಕಾಣಬಹುದು.

1) **ಎಲ್ ಕೆ ಜಿ ಮತ್ತುಯು ಕೆ ಜಿ ತರಗತಿಗಳ ಪ್ರಾರಂಭ:-**
   2019-20 ನೇ ಸಾಲಿನಿಂದ ಎಲ್ ಕೆ ಜಿ ಮತ್ತು ಯು ಕೆ ಜಿ ವಿಭಾಗವನ್ನು ತೆರೆಯಲಾಗಿದ್ದು 42 ಮಕ್ಕಳು ದಾಖಲಾಗಿರುವುದು ಅದರ ಬೇಡಿಕೆಗೆ ಹಿಡಿದ ಕನ್ನಡಿಯಾಗಿದೆ. ಒಬ್ಬ ಶಿಕ್ಷಕಿಯನ್ನು ಮತ್ತು ಡಿ ದರ್ಜೆಯವರನ್ನು ಶಿಕ್ಷಕರೇ ನೇಮಿಸಿಕೊಂಡಿದ್ದು ಶಿಕ್ಷಕರೇ ತಮ್ಮ ಸಂಬಳದಲ್ಲಿ ಸ್ವಲ್ಪ ಭಾಗವನ್ನು ಇದಕ್ಕೆ ವಿನಿಯೋಗಿಸುತ್ತಿದ್ದಾರೆ. ಇದರಿಂದಾಗಿ ಮುಂದಿನ ವರ್ಷ ಮೊದಲನೇ ತರಗತಿಗೆದಾಖಲಾತಿ ಸಮಸ್ಯೆ ಬರುವುದಿಲ್ಲ.
2) ಎಲ್ಲಾ ಮಕ್ಕಳಿಗೆ ಉಚಿತ ಬ್ಯಾಡ್ಜ್, ಹೆಣ್ಣು ಮಕ್ಕಳಿಗೆ ಉಚಿತ ಸ್ಕಾರ್ಫ್, ಎಲ್ಲಾ ಮಕ್ಕಳಿಗೆ ಉಚಿತ ಊಟದ ತಟ್ಟೆ, ಲೋಟ ಮತ್ತು ಊಟಕ್ಕೆ ಕೂರಲು ಎಲ್ಲಾ ಮಕ್ಕಳಿಗೆ ಚಾಪೆ ವ್ಯವಸ್ಥೆ ಹಾಗು ಎಲ್ಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕಗಳ ವಿತರಣೆ, ಶಾಲೆಯ ಎಸ್ ಡಿ ಎಮ್ ಸಿ ಸದಸ್ಯರು, ಶಿಕ್ಷಕರು ಹಾಗು ದಾನಿಗಳ ಸಹಾಯದಿಂದ ಈ ಮೇಲಿನ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.

3) **ವಾಚನಾಲಯದ ವ್ಯವಸ್ಥೆ** :- ಶಾಲೆಯಲ್ಲಿ 4000 ಪುಸ್ತಗಳ ಪುಸ್ತಕ ಭಂಡಾರವಿರುವುದು ವಿಶೇಷ. ಶಾಲೆಯ ಒಂದು ಕೊಠಡಿಯನ್ನು ಅದಕ್ಕೆಂದೇ ಮೀಸಲಾಗಿಡಲಾಗಿದೆ. ಈ ಪುಸ್ತಕಗಳನ್ನು ಬಳಸಲು ಮಕ್ಕಳಿಗೆ ವಾರದಲ್ಲಿ ಒಂದು ಅವಧಿ ಮೀಸಲಾಗಿಡಲಾಗಿದೆ. ಶಾಲೆಯ 5 ರಿಂದ 8 ನೇ ತರಗತಿಯ ಮಕ್ಕಳಿಗೆ ವಾಚನಾಲಯ ಬಳಸಲು ಅವಕಾಶ ನೀಡಲಾಗುತ್ತದೆ.










4) **ವಿಜ್ಞಾನ ಪ್ರಯೋಗಾಲಯ** :- ಶಾಲೆಯಲ್ಲಿರುವ ಮತ್ತೊಂದು ಗುರುತಿಸಬಹುದಾದ ಸಾಧನೆಯಂದರೆ ವಿಜ್ಞಾನ ಪ್ರಯೋಗಾಲಯ. ಸರ್ವಸನ್ನದವಾದ ಪ್ರಯೋಗಕ್ಕೆ ಬೇಕಾದ ಬಹುತೇಕ ಸಲಕರಣೆಗಳನ್ನು ಒಳಗೊಂಡಿರುವ ಪ್ರಯೋಗಾಲಯವಿರುವುದು ವಿಜ್ಞಾನ ಕಲಿಕೆಗೆ ತುಂಬಾ ಸಹಾಯವಾಗಿದೆ. ಇದಕ್ಕೆ ಬೇಕಾದ ಸಾಧನ ಸಲಕರಣೆಗಳನ್ನು ಕೆಡವಲಾದ ಹಳೇ ಕಟ್ಟಡದ ಪಳೆಯುಳಿಕೆಗಳನ್ನು ಬಳಸಿ ತಯಾರಿಸಿರುವುದು ಗಮನಾರ್ಹ.

5) **ವಿಜ್ಞಾನ ವಸ್ತು ಪ್ರದರ್ಶನ** :- ಈ ಪ್ರಯೋಗಾಲಯದ ಸಹಾಯದಿಂದ ಪ್ರತಿ ವರ್ಷ ವಿನ್ಙಾನ ವಸ್ತು ಪ್ರದರ್ಶನವನ್ನುಏರ್ಪಡಿಸಲಾಗುತ್ತದೆ. ಶಾಲಾ ಮಕ್ಕಳಿಂದಲೇ ಎಲ್ಲಾ ವಿಜ್ಞಾನ ಮಾದರಿಗಳನ್ನು ತಯಾರಿಸಲಾಗುತ್ತದೆ. ಸುತ್ತಮುತ್ತಲಿನ ಅನೇಕ ಶಾಲೆಯ ಮಕ್ಕಳು ಪ್ರದರ್ಶನ ನೋಡಲುಆಗಮಿಸುತ್ತಾರೆ.





**ಶೈಕ್ಷಣಿಕ ಸಾಧನೆ**

**1) ಮಕ್ಕಳ ದಾಖಲಾತಿಯಲ್ಲಿ ಏರಿಕೆ:-**

2018-19 ನೇ ಸಾಲಿನಲ್ಲಿ ಮೊದಲನೇ ತರಗತಿಗೆ 09 ಮಕ್ಕಳು ದಾಖಲಾಗಿದ್ದು 2019-20ನೇ ಸಾಲಿನಲ್ಲಿ 18 ಮಕ್ಕಳು ದಾಖಲಾತಿಯನ್ನು ಪಡೆದಿರುವುದು ಖಾಸಗಿ ಶಾಲೆಗಳ ಪೈಪೋಟಿಯಲ್ಲಿ ಗಮನಾರ್ಹ ಸಾಧನೆ ಎನ್ನಬಹುದು. ದಾಖಲಾತಿ ಹೆಚ್ಚಾಗಲು ಕಾರಣಗಳು

*) ಕರಪತ್ರಗಳನ್ನು ತಯಾರಿಸಿ ಸೌಲಭ್ಯಗಳ ಪ್ರಚಾರ ಮಾಡಿಲಾಯಿತು.

*) ಮಸೀದಿಯಲ್ಲಿ ಪ್ರಚಾರ ಮಾಡಲಾಯಿತು.

*) ಮಾತೃ ಭಾಷೆ ಉರ್ದುವಿನ ಜೊತೆಯಲ್ಲಿ ಆಂಗ್ಲ ಭಾಷೆಯ ಬಳಕೆಯಿಂದಾಗಿ ಪೋಷಕರು ಆಕರ್ಷಿತರಾದರು.

2) ಶಾಲೆಯಲ್ಲಿ 6ನೇ ತರಗತಿಯಿಂದಆಂಗ್ಲ ಮಾಧ್ಯಮದಲ್ಲಿ ಕಲಿಕಾ ಪ್ರಕ್ರಿಯೆ ನಡೆಯುತ್ತಿರುದು ಸಹ ಮಕ್ಕಳ ಸಂಖ್ಯೆ ಹೆಚ್ಚಾಗಲು ಸಹಾಯಕ ಅಂಶಗಳಲ್ಲಿ ಒಂದಾಗಿದೆ

**ಸಮುದಾಯದ ಸಹಭಾಗಿತ್ವ:-**

ಶಾಲೆಯ ಮುಖ್ಯ ಶಿಕ್ಷಕರು ಸಮುದಾಯದೊಂದಿಗೆ ಉತ್ತಮ ಸಂಬಂಧ ಹೊಂದಿರುವುದರಿಂದ ಸಮುದಾಯ, ಪೋಷಕರು ಹಾಗು ಎಸ್ ಡಿ ಎಮ್ ಸಿ ಸದಸ್ಯರ ಬೆಂಬಲ ಪಡೆದಿರುತ್ತಾರೆ. ಪರಿಣಾಮವಾಗಿ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ, ಬ್ಯಾಡ್ಜ್, ಸ್ಟಾಫ್ ನಲಿಕಲಿ ಟೇಬಲ್ ಊಟಕ್ಕೆ ಕೂರಲು ಚಾಪೆ, ಮುಂತಾದ ಸೌಲಭ್ಯ ಒದಗಿಸಿ ಕೊಡಲು ಸಾಧ್ಯವಾಗಿದೆ. ಉರ್ದು ಶಾಲೆಯಂದರೆ ಅಸಡ್ಡೆ ಪಡುವ ಈ ಕಾಲದಲ್ಲಿ ಸರ್ಕಾರಿ ಉರ್ದು ಶಾಲೆಯೊಂದು ಇಷ್ಟೆಲ್ಲಿ ಸೌಲಭ್ಯಗಳೊಂದಿಗೆ ಪ್ರವರ್ಧಮಾನಕ್ಕೆ ಬರುತ್ತಿರುವುದು ಸಂತೋಷ ಪಡುವ ವಿಚಾರವೇ ಸರಿ. ಇತರೆ ಉರ್ದು ಶಾಲೆಗಳಿಗೆ ಮಾದರಿಯೂ ಸರಿ.